*ವಿ. ಹಮೀದ್. ವಿಟ್ಲ*
*ಹುಡುಗಿ ಹುಳು ಕಂಡಾಗ ಬೆಚ್ಚಿ ಬೀಳುತ್ತಾ ಳಲ್ಲಾ?*



ಆ ಹುಳುವಿನ ರೂಪ ಥೇಟ್ ಅತ್ತೆಯಂತೆಯೇ ಇದೆಯಂತೆ, ಪಾಪ!

*ಜಿ.ಆರ್. ಆದಿನಾರಾಯಣಮುನಿ, ಬೆಂಗಳೂರು*
*ನುಂಗಿದರೆ ಕಷ್ಟ, ಉಗುಳಿದರೆ ನಷ್ಟ ಇದು ಯಾವುದು?*
ಜರ್ದಾ ಬೀಡಾ!

*ಮಲ್ಲಿಕಾರ್ಜುನ, ಗಿರಗಾಂವ*
*ಜೀವನವೆಂಬ ಪರೀಕ್ಷೆಯಲ್ಲಿ ಯಶಸ್ವಿಯಾಗಲು ಏನು ಮಾಡಬೇಕು?*
ಪರಿಶ್ರಮದ ಪೆನ್ ನಲ್ಲಿ ಅರಿವೆಂಬ ಇಂಕ್ ತುಂಬಿ ಯೌವನವೆಂಬ ಹಾಳೆಯಲ್ಲಿ ಭವಿಷ್ಯದ ಸ್ಕೆಚ್ ರೂಪಿಸಬೇಕು!

*ಅಮರಯ್ಯ, ಶೋರಾಪುರ*
*ಕೈ ಕೆಸರಾಗದೆ ಬಾಯಿ ಮೊಸರು ಮಾಡಿಕೊಂಡವರು ಉಂಟಲ್ಲಾ ಗುರುವೇ...?*
ಅದು ಮೊಸರಲ್ಲ; ಅತಿ ಕಳಪೆ ಮಟ್ಟದ ಕಳ್ಳಭಟ್ಟಿ!

*ಮಲ್ಲಿಕಾರ್ಜುನ ಗಚ್ಚಿ, ಗೋಗಿ*
*ಕೋಟಿ ಕೋಟಿ ಗಳಿಕೆ ಸಂದರ್ಭ ಬಂದಾಗ ಮಾರಾಟವಾಗಿಬಿಡುವ ಜನಪ್ರತಿನಿಧಿಗಳಿರುವ ಮೇರಾ ಭಾರತ್ ಮಹಾನ್ ಅಲ್ಲವೆ?*




ಸ್ವಲ್ಪ ಅಡ್ಜಸ್ಟ್ ಮಾಡ್ಕೊಳಿ ಸಾರ್! ಅಂದು ಮಹಾರಾಜ್, ಇಂದು ಮಹಾ ಹರಾಜ್ ಅಷ್ಟೆ!

*ಎಸ್.ಜಿ. ರಾಜಶೇಖರ ರೆಡ್ಡಿ, ಹಿಂದೂಪುರ*
*ವ್ಯಾಪಾರ ಸಾಪಾರ ಎದುರುಬದುರು ಕೂತಾಗ, ಅಳೋದು ಗಿಳೋದು ಅರ್ಧ ಒಳಗೆ ಹೋದಾಗ, ನಗೋದು ಗಿಗೋದು ಪೂರ್ತಿ ಒಳಗೆ ಹೋದಾಗ, ಈ ನುಡಿಗಟ್ಟಿನ ವ್ಯಾಖ್ಯಾನ?*
ಸರಿ ಬಿಡಿ. ಫುಲ್ ಟೈಟ್ ಆಗೋ ದಾರಿಯ ಚಿತ್ರಣ ಬಿಡಿಸಿದ್ದೀರಿ!

*ಬಿ.ಸಿ. ಓಂಕಾರಾಚಾರ್, ಹೊಸದುರ್ಗ*
*ಮದ್ಯದ ಮತ್ತಿ ಗಿಂತಲೂ ಹಣದ ಮತ್ತು ಘನಘೋರ ಯಾಕೆ ವೃಶ್ಚಿಕಾ?*
ಲೋಟ ಕೇವಲ ಓಟ ಕೆಡಿಸಿದರೆ ನೋಟು ನೋಟವನ್ನೇ ಕೆಡಿಸುವುದರಿಂದ!

*ಶ್ರೀಮತಿ ಸುನಂದಮ್ಮ, ಗೌರಿಬಿದನೂರು*
*ನೀವು ಕೇಳಿದಿರಿ ಅಂಕಣಕ್ಕೆ ನೆಟ್‌ವರ್ಕ್ ಪ್ರಾಬ್ಲಮ್ ಇರುವುದಿಲ್ಲವೇ...?*
ಸೊಟ್ ಉತ್ರ ಕೊಡೋವ್ನ ನೆಟ್‌ದ್ಯಾವ್ರಾ ಪ್ರಾಬ್ಲಂ ಬರಲ್ಲ!

*ಕೆ.ಮಲ್ಲೇಶ, ಕೊಡಸೋಗೆ*
*ದೇವರನ್ನು ಪೂಜಿಸುವ ಜನರು ಕ್ಲಬ್‌ಗಳು, ಬಾರ್‌ಗಳಿಗೇಕೆ ದೇವರ ಹೆಸರನ್ನು ಇಡುತ್ತಾರೆ?*
ಅಲ್ಲಿ ನಡೆಯುವ ಅವ್ಯವಹಾರಗಳಿಂದ ಅವರನ್ನು ದೇವರೇ ಕಾಪಾಡಬೇಕೆಂದು!

*ಎಂ. ಬಿ. ಖೋದಾನಪೂರ, ಸವದತ್ತಿ*
*ಎಲ್ಲರ ಮೈಯಲ್ಲಿಯ ರಕ್ತ ಕೆಂಪುವರ್ಣದ್ದೇ ಆದರೂ ಮೈಬಣ್ಣ ಬೇರೆಯಾಗಿರುತ್ತದೆ; ಏಕೆ?*
ಅದು ಬ್ರಹ್ಮನ ತಪ್ಪಂತೆ! ಚರ್ಮದಲ್ಲಿ ರಕ್ತ, ಮಾಂಸ, ಮೂಳೆಗಳನ್ನು ತುಂಬಿ ಬೇಯಿಸಿದಾಗ ಅರ್ಧ ಬೆಂದ ಬೊಂಬೆಗಳು ಇಂಗ್ಲೆಂಡ್, ಸೀದುಹೋದವು ಆಫ್ರಿಕಾ ಮತ್ತು ಹದವಾದವು ಭಾರತ ಸೇರಿದವಂತೆ!

*ಪಿ.ಎನ್. ಶ್ರೀವತ್ಸ, ಬೆಂಗಳೂರು*
*ಕೊಟ್ಟಿಗೆಯಲ್ಲಿ ದನಗಳನ್ನು, ರೆಸಾರ್ಟ್‌ಗಳಲ್ಲಿ ಶಾಸಕರನ್ನು ಕೂಡಿಹಾಕುವುದರಲ್ಲಿ ಏನಾದರೂ ವ್ಯತ್ಯಾಸವಿದೆಯೇ?*
ಏನೇನೂ ಇಲ್ಲ; ಹೊರಬಿಟ್ಟಾಕ್ಷಣ ಎರಡೂ ಎದುರುಮನೆಯ ಕಾಂಪೌಂಡಿಗೆ ನುಗ್ಗಿ ಪೊಗದಸ್ತಾಗಿ ಮೇಯುತ್ತವೆ!

*ಎಚ್. ಆರ್. ದೇಸಾಯಿ, ರಾಯಚೂರು*
*ನಿವೃತ್ತನಾದಮೇಲೆ ದಿನದ 24 ಗಂಟೆ, ವಾರದ ಏಳುದಿನ, ಮಾಸದ 30 ದಿನ, ವರ್ಷದ 12 ತಿಂಗಳು ಹೇಗೆ ಕಳೆಯಬೇಕು?*
ದಿನವೂ ಹುಬ್ಬು ಗಂಟಿಕ್ಕಿಸದೆ, ಪರಿವಾರದೊಡನೆ, ಮಾಸದ ನಗೆ ಹೊತ್ತು, ಹರ್ಷವರ್ಷ ಹರಿಸುತ್ತಾ!

*ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ*
*ಎಲ್ಲಾ ಅನಾಹುತಗಳಿಗೂ ಹಣವೇ ಕಾರಣವಲ್ಲವೇ ರಾಮ್‌ಜೀ?*
ಹೀಗೆಲ್ಲಾ ಹೇಳಿದರೆ ಪಡ್ಡೆ ಹುಡುಗರ ಬೈಕ್, ಕ್ಲೀನರ್ ಓಡಿಸುವ ಲಾರಿ, ಬಾಯಿ ತೆರೆದ ಮ್ಯಾನ್‌ಹೋಲ್‌ಗಳಿಗೆ ಅವಮಾನ ಮಾಡಿದಂತೆ, ಎಚ್ಚರ!

## ಬಹುಮಾನಿತ ಪ್ರಶ್ನೆ

*ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ*
*ನಮ್ಮ ಟಿ.ವಿ. ಚಾನಲ್‌ಗಳು ವಾಮಾಚಾರವನ್ನೂ ಒಂದು ಕಾರ್ಯಕ್ರಮವಾಗಿ ಮಾಡಿವೆಯಲ್ಲಾ?*
ಬ್ರಹ್ಮಾಂಡದಂತಹ ಸುಳ್ಳುಗಳನ್ನೇ ತೋರಿಸುವಾಗ ಇದೇನು ಮಹಾ...... ಆಚಾರ ಕೆಟ್ರೂ ಟಿಆರ್‌ಪಿ ಕೆಡಬಾರದು!

*ಸಿ.ಜಿ. ವಾಸುಕಿ, ಶಿರಸಿ*
*ಇಷ್ಟೆಲ್ಲಾ ಪ್ರಶ್ನಾರ್ಥಿಗಳಿಗೆ ಉತ್ತರ ಕೊಡುವಷ್ಟು ಶಕ್ತಿ ನಿಮಗೆ ಎಲ್ಲಿಂದ ಬಂತು ರಾಮ್‌ಜೀ?*
(ಉತ್ತರ ತಪ್ಪಾದರೆ ಅಂಕಣ ತಪ್ಪೀತೆಂಬ) ಭಯವೇ ಶಕ್ತಿಯ ಮೂಲವಯ್ಯಾ!

*ಎಂ.ಎಸ್.ಧರ್ಮೇಂದ್ರ, ಜಿ.ಟಿ.ಆರ್.ಇ. ಕ್ಯಾಂಪಸ್*
*ಸ್ಯಾಂಡಲ್‌ವುಡ್‌ಗೆ ಖ್ಯಾತಿಯಾಗಿದ್ದ ನಮ್ಮ ರಾಜ್ಯ ಈಗ ಸ್ಕ್ಯಾಂಡಲ್‌ಗೆ ಖ್ಯಾತಿಯಾಗಲು ಯಾರು ಕಾರಣ?*



ಬ್ರಿಟಿಷರು! ಅವರು ಸ್ಕ್ಯಾಂಡಲ್ ಎಂಬ ಪದವನ್ನು ಕಂಡುಹಿಡಿಯದಿದ್ದರೆ ನಮಗೆ ಈ ಅಪಖ್ಯಾತಿ ಬರುತ್ತಿರಲಿಲ್ಲ.

*ಅಶ್ವಿನಿ ವಿ. ಹೆಗಡೆ, ಭೈರುಂಬೆ*
*ಶ್ರೀಮಂತರು ಹರಿದ ಬಟ್ಟೆ ಧರಿಸಿದರೆ ಫ್ಯಾಷನ್; ಬಡವರು ಹರಿದ ಬಟ್ಟೆ ಧರಿಸಿದರೆ?*
ದುಡ್ಡಿಲ್ಲದಿದ್ದರೂ ಶ್ರೀಮಂತನಂತೆ ಬಟ್ಟೆ ಧರಿಸುವ ಧಿಮಾಕು! ಎಂದನೊಬ್ಬ ಅಲ್ಪಜ್ಞ.

*ಪಿ.ಜೆ. ರಾಘವೇಂದ್ರ, ಮೈಸೂರು*
*ಮಾನವನನ್ನು ಖರೀದಿ/ಮಾರಾಟ ಮಾಡುವುದು ಅಪರಾಧ! ಶಾಸಕರು ಮಾನವರಲ್ಲವೇ?*
ಛೀ! ಧನಪಿಶಾಚಿ, ಭೂಪಿಶಾಚಿ, ಗಣಿಪಿಶಾಚಿಗಳನ್ನು ಮನುಷ್ಯರೆನ್ನುವಿರಲ್ಲಾ... show cause as to why action should not be against you!

■ ರಾಮ್